ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಜಿಲ್ಲಘಟ್ಟ ತಾಲ್ಲೂಕು ಗಂಜಿಗುಂಟೆ ಹೋಬಳಿ ಚಿಕ್ಕ ಬರದರಗಟ್ಟದಲ್ಲಿ ಯಿರುವ ದೊಡ್ಡ ಬೈರರಡ್ಡಿಯ ವಿಷಯದಲ್ಲಿ—

ಸ॥ 1887ನೇ ಇಸವಿ ದಿವಾಳಿ ಕೇಸ್ ನಂಬರು 44.

ಹುಕ್ಕುಂ.

ಮೇಲ್ಕಂಡ ದೊಡ್ಡ ಬೈರರಡ್ಡಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಬೆಂಗಳೂರು ಸಬ್ ಜಡ್ಜೀಯವರಾದ ಮೆ॥ ಕೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಸದರೀಯವನ ಪರವಾಗಿ ಅಡ್ವೊಕೇಟ್ ರಾಮಸ್ವಾಮಯ್ಯಂಗಾರ್ರನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸು ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—
1—2—3—4—5—6 ಮಂದಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ದೊಡ್ಡಬೈರರಡ್ಡಿಯು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಯಿದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ॥ 1887ನೇ ಯಿಸವಿ ಮಾರ್ಚೀ 11ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಬಲಗು.	ಯಾವಾಗ ದೇಣೆ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಚಿಂತಾಮಣಿ ಕಂಚಿಸುಬ್ಬಯ್ಯ ..	700 0 0	1886	ಚಿಕ್ಕಬಳ್ಳಾಪುರದ ಮುನಿಸಿಫ್ ಕೋರ್ಟ್ ಅರಿಜಿನಲ್ ನಂ. 416ನೇ ಡಿಕ್ರೀ ಬಾಬತು	
2	ಡಿಟೋ ಆಕ್ಕಪ್ಪಯ್ಯ ..	12 6 0	1886	ಡಿಕ್ರೀ ಬಾಬತು	
3	ಜಿಲ್ಲಘಟ್ಟ ತಾಲ್ಲೂಕು ಬನೆಟ್ಟಹಳ್ಳಿಯಲ್ಲಿ ಇರುವ ಭೂಮೇನಹಳ್ಳಿ ಪಾರಯ್ಯಗೆ ..	500 0 0	1886	ಕೋಲಾರದ ಮುನಿಸಿಫ್ ಕೋರ್ಟ್ ಅರಿಜಿನಲ್ ನಂ. 595ನೇ ಡಿಕ್ರೀ ಬಾಬತು	
		500 0 0	..	ತಮಸೂಕು ಬಾಬತು	
4	ಚಿಂತಾಮಣಿ ಕಂಚೀತಾರಾಮಯ್ಯ	38 6 0	1886	ಡಿಕ್ರೀ ಬಾಬತು	
5	ಜಿಲ್ಲಘಟ್ಟ ತಾಲ್ಲೂಕಿಗೆ ..	60 0 0	..	ಕಂದಾಯದ ಬಾಕೀ	
6	ಕೋಲಾರದಲ್ಲಿಯಿರುವ ಪ್ಲೀಡರ್ ವಕ್ಕಲೇರಿ ಕೃಷ್ಣರಾಯರಿಗೆ ..	20 0 0	..	ತಂಸೂಕು ಬಾಬತು	
		1830 12 0			

ಸಿ. ಕೈಸ್,
ಸಬ್ ಜಡ್ಜ್.